# ಕಾಯಕ ತತ್ವ

ಭಾರತ ತತ್ವನಿರೂಪಣೆಗಳಿಗೆ ಹೆಸರುವಾಸಿ. ಆದರೆ ಅವುಗಳ ಅನುಷ್ಠಾನಕ್ಕೆ ಅಷ್ಟಾಗಿ ನಿಷ್ಠೆ ತೋರದು. ಹನ್ನೆರಡನೆಯ ಶತಮಾನದಲ್ಲಿ ಪ್ರಚಲಿತಕ್ಕೆ ಬಂದ ಕಾಯಕ ತತ್ವವೂ ಅವುಗಳಲ್ಲಿ ಒಂದು. ಅದುವರೆಗೂ ಹರಿದುಬಂದ ಭಕ್ತಿಪಂಥಗಳ ಪ್ರವಾಹದಲ್ಲಿ ಕೊಚ್ಚಿ ಹೋಗದೆ ಭಿನ್ನವಾಗಿ ಕಾಣುವುದು ವಚನ ಚಳವಳಿ. ವರ್ಣಾಶ್ರಮ, ಜಾತಿಪದ್ಧತಿಗಳಿಂದ ಕಂಗೆಟ್ಟಿದ್ದ ಸಮಾಜದಲ್ಲಿ ತನ್ಮೂಲಕ ಸಮಸಮಾಜದ ಕನಸನ್ನು ಬಿತ್ತಿ ಲವಲವಿಕೆಯನ್ನು ತಂದಿದ್ದು ವಚನ ಚಳವಳಿ.

ವರ್ಣ, ವರ್ಗ, ಲಿಂಗ ಸಮಾನತೆಯನ್ನು ಮೊಟ್ಟಮೊದಲಿಗೆ ಪ್ರತಿಪಾದಿಸಿದವರು ವಚನಕಾರರು. ತಮ್ಮ ಚಿಂತನೆಗೆ ಭಾವ ಶುದ್ಧಿ, ಜ್ಞಾನ ಶುದ್ಧಿ ಅಗತ್ಯವೆಂದು ಸಾರಿದವರು. ಮೇಲುಕೀಳೆಂಬುದಿಲ್ಲ, ಹಾಲನೇಮ, ಅಂಬಲಿಯ ನೇಮ ಎರಡೂ ಸಮ ಎಂದು ಬಗೆದವರು. ಮೃದುವಚನವೆ ಸಕಲ ಜಪತಪಂಗಳಯ್ಯಾ ಎಂಬ ಸರಳ ದಿವ್ಯ ಮಂತ್ರವನ್ನು ಕಲಿಸಿದವರು. ಧರ್ಮವೆಂದರೆ ದೇವಲೋಕದತ್ತ ಮುಖಮಾಡುವುದಲ್ಲ, ಮನುಷ್ಯ ಲೋಕವನ್ನು ಹಸನುಗೊಳಿಸುವುದು ಶರಣ ಧರ್ಮದ ಧ್ಯೇಯವೆಂದು ಸಾರಿದರು. ಆದರೆ ಅಂತಹ ಒಂದು ನಿಷ್ಕಳಂಕ ಜೀವನ ಮಾರ್ಗ ಸ್ವತಂತ್ರ ಧರ್ಮವಾಗಿ ನಿಲ್ಲಲು ಸಾಧ್ಯವಾಗದೆ ಕೇವಲ ಪ್ರಗತಿಪರರ ಚಟುವಟಿಕೆಯಾಗಿ ಉಳಿದುಹೋದದ್ದು ಇತಿಹಾಸದ ದೊಡ್ಡ ದುರಂತಗಳಲ್ಲೊಂದು. ಆದರೂ ಕನ್ನಡ ನೆಲದ ಧರ್ಮವಾಗಿ ಭಾಷೆಗೆ ಆ ಚಳವಳಿ ನೀಡಿದ ಸಮೃದ್ಧ ಕೊಡುಗೆಯನ್ನು ಅವರ ಕರುಣೆಯ ಕಂದಮ್ಮಗಳಾದ ನಾವು ಮರೆಯುವಂತಿಲ್ಲ.

ಯಾವುದೇ ಚಳವಳಿಗೆ ಪ್ರತಿಭಟನೆಯ ಕಿಡಿ ಅಗತ್ಯವಾಗಿ ಬೇಕು. ವಚನ ಚಳವಳಿಗೂ ತಾಕಿದ ಅಂತಹದ್ದೊಂದು ಕಿಡಿ ಸ್ಥಾವರಗೊಂಡಿದ್ದ ದೇವಾಲಯ ಸಂಸ್ಕೃತಿ ಎಂದು ಹೇಳಬಹುದು. ಹಾಗೆಂದರೆ ಅದು ಧಾರ್ಮಿಕ ಚಳವಳಿಯಾಗಿತ್ತು ಎಂದೇನೂ ಅಲ್ಲ. ಧಾರ್ಮಿಕತೆಯ ನೆಪದಲ್ಲಿ ಸಮಾಜವನ್ನು ಶೋಷಿಸುತ್ತಿದ್ದ ದೇವಾಲಯ ವ್ಯವಸ್ಥೆ ತಳವರ್ಗದ ಜನರಲ್ಲಿ ಕಿಚ್ಚು ಹಚ್ಚಿದ್ದರೆ ಆಶ್ಚರ್ಯವಿಲ್ಲ. ಅದರ ನಾಯಕತ್ವವನ್ನು ವಹಿಸಿದವನು ಬ್ರಾಹ್ಮಣ ಜಾತಿಯಲ್ಲಿಯೆ ಹುಟ್ಟಿ ಮಾನವತಾವಾದವನ್ನು ಮೆರೆದ ಬಸವಣ್ಣ. ಬಸವಣ್ಣ ವೈದಿಕ ಬ್ರಾಹ್ಮಣನಲ್ಲ, ಲಿಂಗಿ ಬ್ರಾಹ್ಮಣ ಅಂದರೆ ಶೈವ ಬ್ರಾಹ್ಮಣ ಎಂಬ ವಾದವನ್ನು ಇತ್ತೀಚೆಗೆ ವಿದ್ವಾಂಸರು ಮಂಡಿಸುತ್ತಿದ್ದಾರೆ. ಬ್ರಾಹ್ಮಣ ಎಂಬ ಗುಣವಾಚಕವನ್ನು ಸೇರಿಸಿ ಗುರುತಿಸಿಕೊಳ್ಳಲು ಅನೇಕ ಜಾತಿಗಳು (ಈಶಾನ್ಯ ಭಾರತ ಮತ್ತು ನೇಪಾಳದಲ್ಲಿ ಅಸ್ಪೃಶ್ಯವೆನಿಸಿರುವ ವಿಶ್ವಕರ್ಮವೂ ಸೇರಿದಂತೆ) ಹಾತೊರೆಯುತ್ತಿರುವಾಗ ಅದನ್ನು ಒಪ್ಪುವ ಅಗತ್ಯವಿಲ್ಲ. 'ಆನು ಹಾರುವನೆಂದರೆ ಕೂಡಲಸಂಗಮ ನಗುವನಯ್ಯಾ' ಎಂಬ ಅಣ್ಣನ ವಚನವೇ ಈ ವಾದವನ್ನು ತಳ್ಳಿಹಾಕಿಬಿಡುತ್ತದೆ. ಉಚ್ಚಕುಲದಲ್ಲಿ ಹುಟ್ಟಿದೆನೆಂಬ ಕಷ್ಟವ ನೀಗಿಕೊಳ್ಳಲು ನಿರ್ಜಾತೀಕರಣಗೊಂಡವನು ಬಸವಣ್ಣ.

ಅಂದಿನ ಕಾಲದಲ್ಲಿ ದೇವಾಲಯಗಳೆಂದರೆ ಸಂಪತ್ತಿನ ಸಂಗ್ರಹಗಳಾಗಿದ್ದವು. ಶಾಸನಗಳು ಹೇಳುವಂತೆ ದೇವಾಲಯಗಳು ತಾವೇ ನಾಣ್ಯಗಳನ್ನು ಟಂಕಿಸುವ ಅಧಿಕಾರ ಪಡೆದಿದ್ದವು. ಆಭರಣ ವ್ಯವಹಾರಗಳನ್ನು ಮಾಡುತ್ತಿದ್ದವು. ಕೆಲವು ದೇವಾಲಯಗಳಲ್ಲಿ ಸಾವಿರಾರು ಕೆಲಸಗಾರರಿದ್ದರು, ನೂರಾರು ಕುಶಲಕರ್ಮಿಗಳಿದ್ದರು. ಸಾಮಾನ್ಯ ಜನರಿಗೆ ಬಡ್ಡಿಗೆ ಹಣವನ್ನು ಕೊಡುತ್ತಿದ್ದ ದೇವಾಲಯಗಳ ಬಡ್ಡಿದರ ಶೇ. ಮೂವತ್ತರವರೆಗೂ ಇತ್ತು! ದೇವಾಲಯಗಳನ್ನು ನಿಯಂತ್ರಿಸುತ್ತಿದ್ದ ಪುರೋಹಿತಶಾಹಿ ರಾಜಕಾರ್ಯದಲ್ಲಿ ತೊಡಗುತ್ತಿದ್ದರು. ಆದರೆ ರಾಜರು ದೇವಾಲಯಗಳ ಉಸಾಬರಿಗೆ ಹೋಗುತ್ತಿರಲಿಲ್ಲ. ದೇವಾಲಯಗಳು ನ್ಯಾಯಾಲಯಗಳಾಗಿಯೂ ಕೆಲಸ ಮಾಡುತ್ತಿದ್ದವು. ಅಲ್ಲಿನ ಸ್ಥಾನಪತಿಗಳು ಸಾತ್ವಿಕ ಭ್ರಷ್ಟಿಗಳಾಗೇನೂ ಉಳಿದಿರಲಿಲ್ಲ. ಐಹಿಕ ಭೋಗದ ವ್ಯಸನಿಗಳಾಗಿದ್ದರು. ದೇವದಾಸಿ ಪದ್ಧತಿಯ ಮೂಲ ದೇವಾಲಯಗಳೆ ಎಂಬುದು ತಿಳಿದ ವಿಷಯವೇ ಆಗಿದೆ. ಅದರ ಪಳೆಯುಳಿಕೆಯಾಗಿ ಸಾಕ್ಷೀರೂಪದಲ್ಲಿ ಇಂದಿಗೂ ತಿರುವಾಂಕೂರಿನ ಪದ್ಮನಾಭಸ್ವಾಮಿ ದೇವಾಲಯ ನಿಂತಿದೆ. ಅಲ್ಲಿನ ಬಹು ಮಾಳಿಗೆಗಳಲ್ಲಿ ತುಂಬಿರುವ ಸುಮಾರು ಒಂದು ಲಕ್ಷ ಕೋಟಿ ರೂಗಳ ನಿಧಿಯ ಬಳಕೆಗಾಗಿ ಸಾರ್ವಜನಿಕ ಅಹವಾಲು ದೇಶದ ಸರ್ವೋಚ್ಚ ನ್ಯಾಯಾಲಯದಲ್ಲಿ ತೀರ್ಪಿಗಾಗಿ ಕಾಯುತ್ತಿದೆ. ಬಸವಣ್ಣ ದೇವರನ್ನು ಉಳಿಸಿಕೊಂಡು ದೇವಾಲಯವನ್ನು ನಿರಾಕರಿಸಿದುದು ಈ ಕಾರಣಕ್ಕೇ ಇರಬೇಕು. ಗುಜರಾತಿನ ಸೋಮನಾಥ ದೇವಾಲಯವನ್ನು ಮಹಮದ್ ಘಜನಿ 17 ಬಾರಿ ದೋಚಿದ ಕಾರಣವೂ ಸ್ಪಷ್ಟವಾಗಿಯೆ ಇದೆ.

ಇನ್ನು ತೆರಿಗೆ ವಿಷಯಗಳಿಗೆ ಬಂದಾಗ ಶಾಸನಗಳೇ ಹೇಳುವಂತೆ ಅಕ್ಕಸಾಲಿ, ನಾಯಿಂದ, ಅಗಸ, ಅಂಬಿಗ, ಕಮ್ಮಾರ, ಕುಂಬಾರ ಮೊದಲಾದವರು ತೆರಿಗೆ ಕೊಡಬೇಕಾಗಿತ್ತು. ಗಾಣದ ತೆರೆ, ನೂಲು ತೆರೆ, ಮಗ್ಗದ ತೆರೆ, ಬಣ್ಣದ ತೆರೆ, ಕುಲುಮೆದೆರೆ ಹೀಗೆ ಎಲ್ಲಾ ವೃತ್ತಿಯವರೂ ತೆರಿಗೆ ಕೊಡಬೇಕಾಗಿತ್ತು. ಹುಡುಗಿ ಮೈನೆರೆದರೆ, ಮಗ ಹುಟ್ಟಿದರೆ ತೆರಿಗೆ ತೆರಬೇಕಾಗಿತ್ತೆಂಬುದು ಸೋಜಿಗವೆನಿಸಿದರೂ ಸತ್ಯವೆಂಬುದನ್ನು ಇತಿಹಾಸ ಹೇಳುತ್ತದೆ. ಇಂತಹ ತೆರಿಗೆಗಳನ್ನು ಕೊಡಲಾಗದೆ ಊರುಬಿಟ್ಟು ಹೋದವರು, ಅವಮಾನಿತರಾಗಿ ಮಡಿದವರು ಅದೆಷ್ಟೊ. ಇದಕ್ಕೆ ವಿರುದ್ಧವಾಗಿ ಸಂಪತ್ತನ್ನು ಅನುಭವಿಸಿದವರು ವರ್ತಕರು, ಪುರೋಹಿತರು, ಅಧಿಕಾರಿಗಳು. ದಾನ ಶಾಸನಗಳು ಹೇಳುವಂತೆ ಅಗ್ರಹಾರ ಮತ್ತು ದೇವಸ್ಥಾನಗಳೇ ದಾನದ ಸಿಂಹ ಪಾಲನ್ನು ಪಡೆಯುತ್ತಿದ್ದವು.

ಇಂತಹ ಬರ್ಬರ ಅನ್ಯಾಯಗಳನ್ನು ನೋಡಿದ ಬಸವಣ್ಣ ಜನಿವಾರವನ್ನು ಕಿತ್ತು ಬಿಸುಟು ಅಗ್ರಹಾರದಿದ ಹೊರಬಂದದ್ದು ಆಶ್ಚರ್ಯವೆನಿಸುವುದಿಲ್ಲ. ಶೋಷಿತ ವರ್ಗವನ್ನು ಸಂಘಟಿಸಿ ಸ್ವಸ್ಥ ಸಮಾಜದ ಕನಸು ಕಟ್ಟಿ, ನನಸಾಗಿಸುವ ಕಡೆ ಕ್ರಾಂತಿಯ ಹೆಜ್ಜೆಗಳನ್ನಿಟ್ಟ ಬಸವಣ್ಣ ಪುರೋಹಿತಶಾಹಿಯ ಎದುರು ಸೋಲುಣ್ಣಬೇಕಾಯಿತು. ಆದರೆ ಅವನು ಮುನ್ನಡೆಸಿದ ಚಳವಳಿಗೆ ಗೆಲುವಾಯಿತು. ಈಗಲೂ ಶೋಷಣೆಯ ಬಿರುಗಾಳಿಗೆ ಎದುರಾದಾಗ ನಾವು ತಬ್ಬಿಕೊಳ್ಳುವುದು ಬಸವಣ್ಣನೆಂಬ ಆಲದ ಮರವನ್ನೆ.

■ ಮೂಚಿ

## ಮಾತೇ ಮುತ್ತು

★ ಹೂವಿನಂತೆ ಬೆಳ್ಳಗಿರುವ ಕಿರಣಾವಳಿಯನ್ನು ಚಂದ್ರನು ಹೇರಳವಾಗಿ ಪಸರಿಸುತ್ತಾನೆ. ಆದರೆ ಇದರಿಂದ ನೈದಿಲೆಗಳು ಮಾತ್ರ ಅರಳುತ್ತವೆ. ಕೆಲವು ಅರಳುವುದೇ ಇಲ್ಲ. ಇದು ಜಗತ್ತಿನ ಸ್ವಭಾವ.

-ಚಿತ್ರ ಮೀಮಾಂಸ

★ ಉಪದೇಶ ಮಾಡುವುದು ದಡ್ಡತನ! ಒಳ್ಳೆಯ ಉಪದೇಶ ಮಾಡುವುದು ಅಪಾಯಕರ!

-ಆಸ್ಕರ್ ವೈಲ್ಡ್

★ ಜಯವನ್ನು ಬಯಸುವವರು ಸತ್ಯ, ಕರುಣೆ, ಧರ್ಮ ಮತ್ತು ಪ್ರಯತ್ನದಿಂದ ಗೆಲ್ಲುವಂತೆ– ಬಲ, ಪೌರುಷಗಳಿಂದ ಗೆಲ್ಲುವುದಿಲ್ಲ.

-ಮಹಾಭಾರತ

★ ಮೌನಿಯಾದವನಿಗೆ ಜಗಳವಿಲ್ಲ, ಎಚ್ಚರಿಕೆಯುಳ್ಳವನಿಗೆ ಭಯವಿಲ್ಲ.

-ಪಂಚತಂತ್ರ

★ ಹಿರಿಯ ನಾನೆನಬೇಡ, ಗುರುವ ನಿಂದಿಸಬೇಡ, ಬೇರೆಯವರ ಕೂಡ ಹಗೆ ಬೇಡ, ಬಂಗಾರದೆರವು ಬೇಡ.

-ಸರ್ವಜ್ಞ

★ ಲೋಕದಲ್ಲಿ ಚಂದನ ತಂಪಾಗಿರುತ್ತದೆ. ಅದಕ್ಕಿಂತ ಚಂದ್ರ ತಂಪು. ಸಜ್ಜನರ ಮನಸ್ಸು ಅದಕ್ಕಿಂತಲೂ ತಂಪು.

-ಮಾಲವಿಕಾಗ್ನಿ ಮಿತ್ರ

★ ಬಡವರ ಮನೆಯ ಸೊಡರು ಕುಂದುವುದೆ?

-ರಾಘವಾಂಕ

★ ಎಲ್ಲ ರೀತಿಯ ಶೌಚಗಳಲ್ಲಿ ಅರ್ಥಶೌಚ ಶ್ರೇಷ್ಠವಾದದ್ದು. ಯಾರು ಹಣಕಾಸಿನ ವ್ಯವಹಾರದಲ್ಲಿ ಶುದ್ಧರೋ ಅವರೇ ನಿಜವಾಗಿ ಶುಚಿರ್ಭೂತರು.

-ಮನುಸ್ಮೃತಿ

★ ಸಾಮಾನ್ಯವಾಗಿ ಜ್ಞಾನಿಗಳ ಸಭೆಯಲ್ಲಿ ಅಜ್ಞಾನಿಗಳು ಬಾಯ್ಬಿಡದಿರುವುದೇ ಭೂಷಣ.

-ಭರ್ತೃಹರಿ

★ ವಿದ್ಯೆಗೆ ಸಮನಾದ ಮಿತ್ರನಿಲ್ಲ, ಅಜ್ಞಾನಕ್ಕೆ ಸಮನಾದ ಶತ್ರುವಿಲ್ಲ.

-ಸುಭಾಷಿತ